ಹಿರಿಯರಿಗೆ ಇದೇ ಗತಿ. ಅವುಗಳ ಬಗ್ಗೆ ಚರ್ಚೆಯೂ ಸ್ವಾರಸ್ಯಕರವೇ. ಕೆಲವರಂತೂ ಅವುಗಳಲ್ಲಿ ಲೀನವಾಗಿ ಹೋಗಿರುತ್ತಾರೆ. ನಮ್ಮ ಮಾವ ಧಾರವಾಡದಿಂದ ಫೋನಿನಲ್ಲಿ ಮಾತನಾಡುವಾಗಲೂ "ಸುಕನ್ಯಾ ತಿರಗಿ ಬಂದ್ಲಲ್ಲವಾ?" ಎಂದಾಗ ನಾವು ತಬ್ಬಿಬ್ಬು. "ಯಾವ ಸುಕನ್ಯಾ?" ಎಂದಾಗ ಧಾರಾವಾಹಿಯ ಸುಕನ್ಯಾ ಎಂದು ತಿಳಿದು 'ಉಶ್' ಎಂದು ಉಸಿರು ಬಿಟ್ಟದ್ದಿದೆ.

ರಾಮಾಯಣ, ಮಹಾಭಾರತ ಧಾರಾವಾಹಿಗಳು ಬರುತ್ತಿದ್ದ ಸಮಯ. ಬಹುತೇಕ ಎಲ್ಲರೂ ತಪ್ಪಿಸಿಕೊಳ್ಳದೇ ನೋಡುತ್ತಿದ್ದರು. ಹಾದಿಬೀದಿ, ಅಂಗಡಿಗಳೆಲ್ಲ ಖಾಲಿ. ಹಿರಿಯ ಅಜ್ಜಿಯರು ಸೀತೆಯ ಕಷ್ಟಕ್ಕೆ ಕಣ್ಣೊರೆಸಿ ಮೂಗು ಸೀಟಿಕೊಳ್ಳುತ್ತಿದ್ದರು. ರಾಮಾಯಣ ಬರುವಾಗ ನಾವು ಉತ್ತರ ಭಾರತದ ಪ್ರವಾಸದಲ್ಲಿದ್ದೆವು. ಆಗಲೂ ಧಾರಾವಾಹಿ ತಪ್ಪಿಸಿಕೊಳ್ಳಬಾರದೆಂಬ ಪ್ರಯಾಸ. ಪ್ರಯಾಗದಲ್ಲಿ ಅಂದು ವೇಣೀದಾನ ಏರ್ಪಾಡಾಗಿತ್ತು. ಒಂಬತ್ತು ಗಂಟೆಗೆ ತ್ರಿವೇಣಿ ಸಂಗಮದ ತೀರದಲ್ಲಿ ಪಂಡಿತರು ಬಂದು ಜೋಡಿಗಳ ಹೆಸರನ್ನು ಕೂಗುತ್ತಿದ್ದರು. ಎಲ್ಲಾ ಜೋಡಿಗಳೂ ತೀರದಲ್ಲೇ ಇದ್ದ ಅಂಗಡಿಗಳಲ್ಲಿ ಟೀವಿಗಳ ಮುಂದೆ ಠಿಕಾಣಿ ಹಾಕಿದ್ದಾರೆ. "ರಾಮಾಯಣ ಮುಗಿದು ಬಿಡಲಿ ಭಟ್ಟರೇ" ಎಂಬ ವಿನಂತಿ ಬೇರೆ. ಬೇರೆ ಉಪಾಯವಿಲ್ಲದೇ ಭಟ್ಟರೂ ಅಲ್ಲೇ ಕುಳಿತರು.

